# ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಕರ್ಮ

## ಮನೋಗತ

'ದೈವಜಾತ ದುಃಖೇ ಭರತಾ ದೋಷ ನಾ ಕುಣಾಚಾ । ಪರಾಧೀನ ಆಹೆ ಜಗತಿ ಪುತ್ರ ಮಾನವಾಚಾ ॥' ತಂದೆಯ ಆಜ್ಞೆಯಂತೆ ವನವಾಸಕ್ಕೆ ತೆರಳಿದ ಶ್ರೀರಾಮನನ್ನು ಯಾವಾಗ ಭರತನು ಪುನಃ ಪುನಃ ಅಯೋಧ್ಯೆಗೆ ಹಿಂತಿರುಗಲು ಒತ್ತಾಯಿಸುತ್ತಾನೆಯೋ, ಆಗ ಶ್ರೀರಾಮನು ಭರತನನ್ನು ಉದ್ದೇಶಿಸಿ ಮೇಲಿನಂತೆ ಹೇಳಿದ್ದನು. ಮನುಷ್ಯನ ಜೀವನವು ಪರಾಧೀನ, ಅಂದರೆ ಪ್ರಾರಬ್ಧದ ಅಧೀನವಾಗಿದೆ ಎಂಬುದು ಇದರ ಬೋಧನೆಯಾಗಿದೆ. ಕರ್ಮಸಿದ್ಧಾಂತಕ್ಕನುಸಾರ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಸುಖ-ದುಃಖಗಳ ಫಲಗಳನ್ನು ಈ ಜನ್ಮದಲ್ಲಿ ಅಥವಾ ಮುಂದಿನ ಜನ್ಮದಲ್ಲಿ ಭೋಗಿಸಬೇಕಾಗುತ್ತದೆ. ಮನುಷ್ಯನ ಪೂರ್ವಜನ್ಮಗಳಲ್ಲಿನ ಕರ್ಮಗಳಲ್ಲಿನ ಯಾವ ಭೋಗಗಳನ್ನು ಭೋಗಿಸುವುದು ಬಾಕಿ ಉಳಿದಿರುತ್ತದೆಯೋ, ಅದಕ್ಕೆ 'ಸಂಚಿತ ಕರ್ಮ'ವೆಂದು ಮತ್ತು ಈ ಜನ್ಮದಲ್ಲಿ ಭೋಗಿಸಬೇಕಾದ ಸಂಚಿತ ಕರ್ಮದಲ್ಲಿನ ಕರ್ಮಗಳಿಗೆ 'ಪ್ರಾರಬ್ಧಕರ್ಮ'ವೆಂದು ಹೇಳುತ್ತಾರೆ. 'ಬುದ್ಧಿಃ ಕರ್ಮಾನುಸಾರಿಣೀ ।' ಅಂದರೆ ಬುದ್ಧಿಯು ಮನುಷ್ಯನಿಗೆ ಪ್ರಾರಬ್ಧಕ್ಕನುಸಾರ ಕರ್ಮಗಳನ್ನು ಮಾಡಿಸುತ್ತದೆ. ಯುಧಿಷ್ಠಿರನು ಧರ್ಮಜ್ಞಾನಿಯಾಗಿರುವಾಗಲೂ ಜೂಜಾಟದಲ್ಲಿ ದ್ರೌಪದಿಯನ್ನು ಪಣಕ್ಕಿಟ್ಟಿದ್ದನು. ಇದರ ಕಾರಣ ಪ್ರಾರಬ್ಧ ! ಪ್ರಾರಬ್ಧದ ಭೋಗವನ್ನು ಎಲ್ಲರಿಗೂ ಅಂದರೆ, ಸಂತರಿಗೂ ಸಹ ಭೋಗಿಸಲೇ ಬೇಕಾಗುತ್ತದೆ. ಪ್ರಾರಬ್ಧದ ಮೇಲೆ ಜಯಗಳಿಸುವ ಉಪಾಯವೆಂದರೆ 'ಕ್ರಿಯಮಾಣ ಕರ್ಮ'.

ಪ್ರಾರಬ್ಧಕ್ಕನುಸಾರ ಬುದ್ಧಿಯು ಹೇಳಿದಂತೆ ನಡೆದುಕೊಳ್ಳಬೇಕೋ ಅಥವಾ ಬೇಡವೋ ಎಂಬುದು ಬುದ್ಧಿಯ ಪ್ರಗಲ್ಭತೆಯ ಮೇಲೆ ಅವಲಂಬಿಸಿರುತ್ತದೆ. ಬುದ್ಧಿಯ ಪ್ರಗಲ್ಭತೆಯು ಸತ್ತ್ವಗುಣದ ಮೇಲೆ ಅವಲಂಬಿಸಿರುತ್ತದೆ ಮತ್ತು ಸತ್ತ್ವಗುಣವು ಸಾಧನೆಯ ಮೇಲೆ ಅವಲಂಬಿಸಿರುತ್ತದೆ. ಯಾವಾಗ ಪ್ರಾರಬ್ಧಭೋಗವನ್ನು ಭೋಗಿಸುವ ಸಮಯವು ಬರುತ್ತದೆಯೋ, ಆಗ ಆ ವ್ಯಕ್ತಿಯಲ್ಲಿನ ಸಂಸ್ಕಾರಗಳಿಂದಾಗಿ ಅವನಿಗೆ 'ಸುಖ-ದುಃಖ'ಗಳ ಅರಿವಾಗುತ್ತಿರುತ್ತದೆ; ಆದರೆ ಸಂಸ್ಕಾರಗಳೇ ನಾಶವಾದರೆ ಸುಖ-ದುಃಖಗಳ ಅರಿವೇ ಆಗುವುದಿಲ್ಲ. ಪ್ರಾರಬ್ಧಕ್ಕನುಸಾರ ದೇಹಭೋಗಗಳು ತಪ್ಪುವುದಿಲ್ಲ; ಆದರೆ ಭೋಗಗಳು 'ಭೋಗ'ಗಳೇ ಅನಿಸದಿದ್ದರೆ ಅದೆಂತಹ ಭೋಗಗಳು ? ಸಾಧನೆಯಿಂದ ಇದೇ ಸಾಧ್ಯವಾಗುತ್ತದೆ. ಸಾಧನೆಯಿಂದ ಸಂಚಿತಕರ್ಮವೂ ನಾಶವಾಗುತ್ತವೆ; ಆದುದರಿಂದ ಸಂಚಿತ ಮತ್ತು ಪ್ರಾರಬ್ಧಗಳಿಗಿಂತ ಕ್ರಿಯಮಾಣವು ನಿಃಸಂದೇಹವಾಗಿ ಶ್ರೇಷ್ಠವಾಗಿದೆ.

ಹಿಂದೂಧರ್ಮವು ಪುನರ್ಜನ್ಮದ ಸಿದ್ಧಾಂತವನ್ನು ಮಂಡಿಸುವಾಗ 'ಜನ್ಮ-ಮೃತ್ಯುವಿನ ಚಕ್ರದಿಂದ ಹೇಗೆ ಮುಕ್ತರಾಗಬೇಕು' ಎಂಬ ಮಾರ್ಗವನ್ನೂ ತೋರಿಸಿದೆ. ಈ ಗ್ರಂಥದಲ್ಲಿ ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಕರ್ಮಗಳ ಅರ್ಥ ಮತ್ತು ಮಹತ್ವ, ಅವುಗಳಿಂದ ಜೀವನದ ಮೇಲಾಗುವ ಪರಿಣಾಮ, ಸಂಚಿತ ಮತ್ತು ಪ್ರಾರಬ್ಧಕರ್ಮಗಳ ಮೇಲೆ ಕ್ರಿಯಮಾಣ ಕರ್ಮದಿಂದ ಹೇಗೆ ಜಯಗಳಿಸಬಹುದು, ಮಟ್ಟಕ್ಕನುಸಾರ ಕ್ರಿಯಮಾಣ ಕರ್ಮಗಳನ್ನು ಮಾಡುವ ಹಂತಗಳು ಇತ್ಯಾದಿಗಳನ್ನು ಉದಾಹರಣೆ ಸಹಿತ ವಿವರಿಸಲಾಗಿದೆ.

ಈ ಗ್ರಂಥವನ್ನು ಓದಿ ಕ್ರಿಯಮಾಣವನ್ನು ಆದಷ್ಟು ಹೆಚ್ಚು ಸಾಧನೆಗೆ ಉಪಯೋಗಿಸಿ ಎಲ್ಲರೂ ಶೀಘ್ರ ಈಶ್ವರಪ್ರಾಪ್ತಿ ಮಾಡಿಕೊಳ್ಳಲಿ ಎಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ.

\- ಸಂಕಲನಕಾರರು

## ಅನುಕ್ರಮಣಿಕೆ


卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೪

卐 ಮುಖಪುಟದ ಸಂಕಲ್ಪನೆ ೫

卐 ಮನೋಗತ ೭

---

೧. ಸಂಚಿತ ಕರ್ಮ ೮

೨. ಪ್ರಾರಬ್ಧಕರ್ಮ (ದೈವ, ಹಣೆಬರಹ, ಅದೃಷ್ಟ) ೯

- * ಜನ್ಮ-ಮೃತ್ಯು ಪ್ರಾರಬ್ಧದ ಅಧೀನವಾಗಿರುವುದು ೧೧
- * ಪ್ರಾರಬ್ಧಭೋಗಗಳನ್ನು ಭೋಗಿಸುವ ಪ್ರಕ್ರಿಯೆ / ಕಾರಣಗಳು ೧೮
- * ಪ್ರಾರಬ್ಧವನ್ನು ಬದಲಾಯಿಸದೆ ಅದನ್ನು ಭೋಗಿಸಲೇಬೇಕಾಗುವುದು ೨೦

೩. ಕ್ರಿಯಮಾಣ ಕರ್ಮ ೫೯

- * ಪ್ರಾರಬ್ಧಕ್ಕಿಂತ ಕ್ರಿಯಮಾಣ ಕರ್ಮವು ಶ್ರೇಷ್ಠವಾಗಿದೆ ೬೮
- * ಬುದ್ಧಿಯ ಪ್ರಗಲ್ಭತೆಗನುಸಾರ ತಪ್ಪು ಕ್ರಿಯಮಾಣ ಕರ್ಮಗಳ ಪ್ರಮಾಣವು ಕಡಿಮೆಯಾಗುತ್ತಾ ಹೋಗುವುದು ೭೪
- * ಕ್ರಿಯಮಾಣ ಕರ್ಮ ಮತ್ತು ಈಶ್ವರೀ (ಗುರು) ಕೃಪೆಯ ಮಹತ್ವ ೭೬

೪. ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಕರ್ಮಗಳನ್ನು ನಾಶಗೊಳಿಸಲು ಜ್ಞಾನದ ಉಪಯುಕ್ತತೆ ೭೮

卐 'ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಕರ್ಮ' ಇವುಗಳ ಬಗ್ಗೆ ಆಳವಾದ ಜ್ಞಾನ ೮೧

卐 'ಕೆಟ್ಟ ಶಕ್ತಿಗಳಿಂದಾಗುವ ತೊಂದರೆ' ಎಂಬ ಸಂಜ್ಞೆಯ ಅರ್ಥ ೮೨



ಹಿಂದೂಸಂಘಟನೆ ಮತ್ತು ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ

**ಹಿಂದೂ ಜನಜಾಗೃತಿ ಸಮಿತಿ**

ಧರ್ಮಶಿಕ್ಷಣವರ್ಗ | ಧರ್ಮಜಾಗೃತಿ ಸಭೆ | ಸ್ವರಕ್ಷಣಾ ತರಬೇತಿ

ಧರ್ಮಜಾಗೃತಿ ಪ್ರದರ್ಶನ | 'ಹಿಂದೂ ಅಧಿವೇಶನ'ಗಳ ಆಯೋಜನೆ

ಹಿಂದುತ್ವರಕ್ಷಣೆಯಲ್ಲಿ ಅಗ್ರೇಸರ : HinduJagruti.org 9343017001